# ಕರ್ನಾಟಕ ಸರ್ಕಾರ

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.331/2021**

ಪಿ.ಡಬ್ಲ್ಯೂ: 8

ಸಿ.ಡಬ್ಲ್ಯೂ: 7

ಸಾಕ್ಷಿದಾರರ ಹೆಸರು : ತಿಮ್ಮಪ್ಪ

ತಂದೆಯ ಹೆಸರು: :ಹಳ್ಳಿಗಪ್ಪ

ವಯಸ್ಸು : **53 ವರ್ಷ**

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ಎಂ ಸಿ ಆರ್ ಪಿ ಕಾಲೋನಿ

**ದಿನಾಂಕ: 09-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಈಗ್ಗೆ ಸುಮಾರು ಮೂರು ವರ್ಷಗಳ ಹಿಂದೆ 9-15 ಗಂಟೆ ಸಮಯದಲ್ಲಿ ನಾನು ಲಿಂಗದಹಳ್ಳಿಯಿಂದ ಕೆಂಚಾಪುರ ಗ್ರಾಮಕ್ಕೆ ಲಾರಿಯಲ್ಲಿ ಬರುತ್ತಿರುವಾಗ ಎದುರುಗಡೆ ಒಂದು ಬೈಕ್ ಗೆ ಲಾರಿ ಅಪಘಾತಪಡಿಸಿರುತ್ತದೆ. ಬೈಕಿನ ಚಾಲಕ ಸ್ಥಳದಲ್ಲೇ ಮೃತಪಟ್ಟಿರುತ್ತಾರೆ. ಘಟನೆಯನ್ನು ನಾನು ಕಣ್ಣಾರೆ ಕಂಡಿರುವುದಿಲ್ಲ. ಆನಂತರ ವಿಚಾರ ತಿಳಿದುಬಂದಿರುತ್ತದೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು:** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕ: **11-02-2020** ರಂದು ನಾನು ಕೆಂಚಾಪುರಕ್ಕೆ ಹೋಗಲು ಬಸ್ ನಿಲ್ದಾಣದಲ್ಲಿ ಕಾಯುತ್ತಿದ್ದೆ ಎಂದರೆ ಸರಿ. ಬಸ್ಸು ಬರದೇ ಇರುವ ಕಾರಣ ನಾನು ಲಾರಿಯನ್ನು ಹತ್ತಿರುತ್ತೇನೆಂದರೆ ಸರಿ. ಲಾರಿಯ ಚಾಲಕ ಅಮೃತ್ ಮಹಲ್ ನ ಹತ್ತಿರ ಲಾರಿ ನಂ.ಕೆಎ **52 7841** ರ ಲಾರಿಯನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ರಂಗಪ್ಪನವರ ಫಾರಂ ಹತ್ತಿರ ಹೋಗುತ್ತಿರುವಾಗ ಕೆಎ **66** ಜಿ **5713** ರ ಬೈಕಿಗೆ ಡಿಕ್ಕಿಪಡಿಸಿದ ಪರಿಣಾಮ ಬೈಕ್ ಚಾಲಕ ಬೈಕಿನಿಂದ ಕೆಳಗೆ ಬಿದ್ದು ತಲೆಗೆ, ಮೈ ಕೈಗೆ ತೀವ್ರ ಸ್ವರೂಪದ ಗಾಯಗಳಾಗಿ ಸ್ಥಳದಲ್ಲೇ ಮೃತಪಟ್ಟಿರುತ್ತಾರೆಂದರೆ ಸರಿ. ಲಾರಿ ಚಾಲಕ ಲಾರಿಯನ್ನು ನಿಲ್ಲಿಸು ಎಂದು ಹೇಳಿದರೂ ನಿಲ್ಲಿಸಲಿಲ್ಲ ಎಂದರೆ ಸರಿ. ಸದರಿ ವಿಚಾರವಾಗಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆಂದರೆ ಸರಿ.

**<u>ಪಾಟೀ ಸವಾಲು : ಆರೋಪಿ ಪರ</u>** <u>ಶ್ರೀ ಕೆ ಪಿ</u> **<u>ವಕೀಲರಿಂದ.</u>**

ಹೇಗೆ ಅಪಘಾತವಾಯಿತು ಎಂದು ನನಗೆ ತಿಳಿದಿರುವುದಿಲ್ಲ. ಅಪಘಾತವನ್ನು ನಾನು ನನ್ನ ಕಣ್ಣಾರೆ ಕಂಡಿರುವುದಿಲ್ಲ.

**<u>ಮರುವಿಚಾರಣೆ</u>:** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

1ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**